# ಕನ್ನಡ ಸಾಹಿತ್ಯ ಮತ್ತು ಸಿನಿಮಾ

ಡಾ.ಲಕ್ಷ್ಮೀನಾರಾಯಣ ಎ.ವಿ
ಸಹ ಪ್ರಾಧ್ಯಾಪಕರು
ಸ.ಪ್ರ.ದ.ಕಾ ಕೆಂಗೇರಿ
Corresponding Author:lakshminarayan2453@gmail.com

ಮನುಷ್ಯ ಬದುಕಿನ ಮುಖ್ಯ ತಳಹದಿ 'ಸಮಾಜ'. ಈ ಸಮಾಜದಲ್ಲಿ ಬದುಕುವ ಮನುಷ್ಯ ಸಮಾಜಕ್ಕೆ ಹೇಗೆ ಸ್ಪಂದಿಸುತ್ತಾನೆ ಎನ್ನುವುದು ಮುಖ್ಯ. ಹಾಗೆಯೇ ಸಾಹಿತ್ಯ, ವಿಜ್ಞಾನ, ಕಲೆ ಧರ್ಮ ಹಾಗೂ ರಾಜಕೀಯಗಳ ಜೊತೆ ಸಂಬಂಧವನ್ನು ಇಟ್ಟುಕೊಂಡಿರುವ ರೀತಿಯೂ ಮುಖ್ಯವಾಗುತ್ತದೆ. "ಸಾಹಿತಿಯು ಒಂದು ಸಮಾಜದ, ಒಂದು ಸಾಂಸ್ಕೃತಿಕ ಘಟಕದ ಅಂಗ. ಇದರಂತೆಯೇ ಅವನೂ ಒಂದು ನಿರ್ದಿಷ್ಟ ಕಾಲಘಟ್ಟದಲ್ಲಿ, ಒಂದು ವಿಶಿಷ್ಟ ಸಮಾಜ ವ್ಯವಸ್ಥೆಯಲ್ಲಿ ಬೇರು ಬಿಟ್ಟಿರುತ್ತಾನೆ. ಆದ್ದರಿಂದ, ಆ ವಿಶಿಷ್ಟ ವ್ಯವಸ್ಥೆಯಿಂದ ಮತ್ತು ಆ ಕಾಲದ ವೈಚಾರಿಕ ಪ್ರಣಾಳಿಕೆಗಳಿಂದ ಅವನು ಪ್ರಭಾವಿತನಾಗದೆ ಇರಲು ಸಾಧ್ಯವಿಲ್ಲ. ತನ್ನ ಸಮಕಾಲೀನ ವ್ಯವಸ್ಥೆಯನ್ನೂ, ವೈಚಾರಿಕತೆಯನ್ನು ಅವನು ವಿರೋಧಿಸಬಹುದು ಅಥವಾ ಒಪ್ಪಿಕೊಳ್ಳಬಹುದು ಅಥವಾ ಅವನ್ನೆಲ್ಲ ಮೀರಿನಿಂತು ತನ್ನತನವನ್ನು ಕಂಡುಕೊಳ್ಳಬಹುದು. ಆದರೆ, ಒಂದಲ್ಲಾ ಒಂದು ರೀತಿಯಲ್ಲಿ ಸ್ಪಂದಿಸದೇ ಇರಲು ಸಾಧ್ಯವಿಲ್ಲ"[1] ಎಂದು ಸಿ.ಎನ್. ರಾಮಚಂದ್ರನ್ ಹೇಳುತ್ತಾರೆ.

ಕನ್ನಡ ಸಾಹಿತ್ಯ ಮತ್ತು ಸಿನಿಮಾ ಕ್ಷೇತ್ರಕ್ಕೆ ಬರಗೂರು ರಾಮಚಂದ್ರಪ್ಪನವರ ಕೊಡುಗೆ ಅಪಾರವಾದುದು. ಬರಗೂರರು ಕವಿಗಳು, ಕತೆಗಾರರು, ಕಾದಂಬರಿಕಾರರು, ವಿಮರ್ಶಕರು ಹಾಗೂ ಚಲನಚಿತ್ರ ನಿರ್ದೇಶಕರಾದವರು. ಬಂಡಾಯ ಮನೋಭಾವವನ್ನು ಇಟ್ಟುಕೊಂಡು ಜನಪರ ನಿಲುವಿನೊಂದಿಗೆ ಕ್ರಿಯಾಶೀಲವಾದವರು. ಸಾಹಿತ್ಯ, ಸಂಸ್ಕೃತಿ, ಸಿನಿಮಾ ಮುಂತಾದ ವಿಷಯಗಳಲ್ಲಿ ಆಸಕ್ತಿಯನ್ನು ತೋರಿಸುತ್ತಾ ಬಂದವರು. ಬರಗೂರರ ಬರವಣಿಗೆಯಲ್ಲಿ ದೇಶೀ ಸಂಸ್ಕೃತಿಯ ಮೂಲವಿದೆ. ಸಂಸ್ಕೃತಿ ಎನ್ನುವುದು ಮೂಲತಃ ಹುಟ್ಟುವುದು ಹಳ್ಳಿಗಳಿಂದ. ಅಂತಹ ಹಳ್ಳಿಗಳ ಒಡಲಿನಿಂದ ಮೂಡಿಬಂದ ಸಂಸ್ಕೃತಿಯನ್ನು ತಮ್ಮ ಕತೆ–ಕಾದಂಬರಿಗಳಲ್ಲಿ ಅನಾವರಣಗೊಳಿಸಿದ್ದಾರೆ. ಇಂದಿನ ವೈಜ್ಞಾನಿಕ ನಾಗರೀಕ ಸಮಾಜಕ್ಕೆ ಸಂಸ್ಕೃತಿ ಅಗತ್ಯತೆಯ ಕುರಿತು ಮುಖ್ಯವಾಗಿ ಮಾತನಾಡುತ್ತಾರೆ. ದೇವನೂರು ಮಹಾದೇವ, ಕುಂವೀಯಂತಹ ಕಥೆಗಾರರು ಗ್ರಾಮ ಬದುಕನ್ನು ತಮ್ಮ ಕಥೆಗಳಲ್ಲಿ ಮೂಡಿಸುವ ರೀತಿ ಬೆರಗು ಹುಟ್ಟಿಸುವಂತಹುದು. ಆದರೆ ಬರಗೂರರು ಗ್ರಾಮ್ಯ ಜೀವನದ ವಿವಿಧ ಮಜಲುಗಳನ್ನು ತೆರೆದಿಟ್ಟರೂ ಹಳ್ಳಿಗಳ ಸಂಸ್ಕೃತಿ ಮತ್ತು ನಗರ ನಾಗರೀಕತೆಯೊಂದಿಗೆ ನಡೆಸುವ ಮುಖಾಮುಖಿ, ಸಾಂಸ್ಕೃತಿಕ ಮತ್ತು ಸಾಮಾಜಿಕ ಸಂಘರ್ಷಗಳನ್ನು ಎಳೆಎಳೆಯಾಗಿ ಬಿಚ್ಚಿಡುವ ರೀತಿ ಅನನ್ಯವಾದುದು. ಆದರೆ, ಬರಗೂರರು "ತಮ್ಮನ್ನು ಕೇವಲ ಕಥೆ–ಕಾವ್ಯ–ಕಾದಂಬರಿಗಳಿಗೆ ಸೀಮಿತಗೊಳಿಸದೆ ನಾಡು–ನುಡಿಗಾಗಿ ಚಿಂತಿಸುವ ಚಿಂತನಶೀಲ ಬರಹಗಾರರಾಗಿದ್ದಾರೆ"[2] ಎಂಬ ಎಚ್.ಟಿ. ಪೋತೆಯವರ ಮಾತುಗಳು ಈ ಸಂದರ್ಭದಲ್ಲಿ ಉಲ್ಲೇಖಾರ್ಹ.

ಅರಿಸ್ಟಾಟಲ್ ತನ್ನ ಕೃತಿಯಲ್ಲಿ ಅನುಕರಣ ತತ್ವವನ್ನು ವಿವರಿಸುತ್ತಾ ಕವಿ ತನ್ನ ಸುತ್ತ ಇರುವ ಪ್ರಪಂಚದಲ್ಲಿಂದ ವಿಷಯವನ್ನು ಆರಿಸಿಕೊಂಡು ಅದನ್ನು ತನ್ನ ಕಾವ್ಯದಲ್ಲಿ ಪುನರ್‌ಸೃಷ್ಠಿ ಮಾಡುತ್ತಾನೆ ಎಂದಿದ್ದಾರೆ. ಅಂದರೆ ಕಾವ್ಯ ಅಥವಾ ಸಾಹಿತ್ಯವು ಒಂದು ಅನುಕರಣ ಕಲೆ ಎನ್ನುವುದು ಇದರ ಅರ್ಥವಾಗಿದೆ. ವಿಶಾಲಾರ್ಥದಲ್ಲಿ ಕವಿಯ ಕಲ್ಪನೆಗೆ ಮೂಲ ಅವನ ಮತ್ತು ಅವನ ಸುತ್ತಲಿನ ಪ್ರಪಂಚದೊಂದಿಗಿನ ಅನುಭವದ ನೆಲೆಯೇ ಆಗಿದೆ.

ಸಾಹಿತ್ಯ ಸೃಷ್ಟಿಯ ಸ್ಫೂರ್ತಿ ನಮ್ಮ ಸುತ್ತಲಿನ ಪ್ರಪಂಚದಿಂದಲೇ ಸಿಗುವಂಥದ್ದು ಎಂದಾದಾಗ, ಆ ಪ್ರಪಂಚವನ್ನು ಕೆಲವರು ಮಾತ್ರ ಹೃದಯಕ್ಕೆ ತಂದುಕೊಳ್ಳುತ್ತಾರೆ ಅನ್ನುವುದು ನಿಜ. ಏಕೆಂದರೆ ಈ ಪ್ರಪಂಚದಲ್ಲಿ ಬದುಕುವವರೆಲ್ಲರೂ ಕವಿಗಳೂ, ಸಾಹಿತಿಗಳು ಆಗಿರುವುದಿಲ್ಲ. ಹೀಗೆ ವಿಶಿಷ್ಟವಾದ ರೀತಿಯಲ್ಲಿ ತನ್ನ ಸಾಮಾನ್ಯ ಸಂದೇಶ ನೀಡುವ ಸಾಹಿತಿ ವಿಭಿನ್ನ ರೀತಿಯ ಕಾರ್ಯಾಚರಣೆಗೆ ತಲೆದೂಗಲೇಬೇಕು. ಹಾಗಾದರೆ ಸಾಹಿತಿಯ ಸಾಹಿತ್ಯವನ್ನು ವಿಮರ್ಶೆ ಮಾಡುವಾಗ ಅವರ ಸಾಹಿತ್ಯದಲ್ಲಿ 'ಈ ಅಂಶ ಯಾತಕ್ಕೆ ಬಂತು?' ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವಲ್ಲಿ, ಆ ಸಂದರ್ಭಕ್ಕೆ ಅವರ ಸುತ್ತಲಿನ ಪ್ರಪಂಚ ಎಂಥದ್ದಾಗಿತ್ತು ಎಂದು ತಿಳಿದುಕೊಳ್ಳಬೇಕಾದ್ದು ಅತ್ಯಂತ ಅಗತ್ಯವೆನಿಸುತ್ತದೆ. ಹಾಗಾಗಿಯೇ ನಾವು ಬರಗೂರರ ಸಾಹಿತ್ಯದ ನೆಲೆಗಳನ್ನು ಅರಿಯಬೇಕಾದರೆ, ಅವರು ಬೆಳೆದು ಬಂದ ಪರಿಸರವನ್ನು ಮನಗಾಣಬೇಕಿದೆ.

ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಬರಗೂರಿನಲ್ಲಿ ವಾಸವಾಗಿದ್ದ ಶ್ರೀ ರಂಗದಾಸಪ್ಪ ಮತ್ತು ಶ್ರೀಮತಿ ಕೆಂಚಮ್ಮನವರ ಎಂಟನೇ ಮಗನಾಗಿ 18.10.1947 ರಲ್ಲಿ ಜನಿಸಿದ ರಾಮಚಂದ್ರಪ್ಪ ತಮ್ಮ ಬಾಲ್ಯದುದ್ದಕ್ಕೂ ಬಡತನವನ್ನೇ ಉಂಡು ಬೆಳೆದವರು. ಸೀಮೆಎಣ್ಣೆಯ ಬುಡ್ಡಿ ಬೆಳಕಿನಲ್ಲಿ ಬಾಲ್ಯದ ಓದು ಓದಿದವರು. ಮುಂದೆ ತಮ್ಮನ್ನು ತಮ್ಮ ಊರ ಹೆಸರಿನೊಂದಿಗೆ ಗುರುತಿಸಿಕೊಂಡು 'ಬರಗೂರು ರಾಮಚಂದ್ರಪ್ಪ' ಎಂದು ಪ್ರಸಿದ್ಧರಾದರು. ಈಗ ಎಲ್ಲರೂ ಅವರನ್ನ 'ಬರಗೂರು' ಎಂದೆ ಗುರುತಿಸುತ್ತಾರೆ. ಅವರ ಸಹಿಯೂ ಕೂಡ 'ಬರಗೂರ್' ಎಂದೆ ಇರುವುದು ಅವರಿಗೆ ತಮ್ಮ ಊರಿನ ಜತೆಗಿರುವ ಆಪ್ತತೆಯ, ಗಟ್ಟಿತನದ ಪ್ರತೀಕವಾಗಿದೆ.

"ಬರಗೂರರ ಪ್ರಾಥಮಿಕ ಶಿಕ್ಷಣ ಬರಗೂರಿನ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ನಡೆಯಿತು. ಪ್ರೌಢಶಾಲಾ ಶಿಕ್ಷಣ ಶಿರಾ ಮತ್ತು ತುಮಕೂರಿನ ಪ್ರೌಢಶಾಲೆಯಲ್ಲಿ ನಡೆಯಿತು. ತುಂಬಾ ಬಡತನದಿಂದಲೇ ತಮ್ಮ ಹೈಸ್ಕೂಲು ವಿದ್ಯಾಭ್ಯಾಸವನ್ನು ಮಾಡಿದ ಅವರು ಎಷ್ಟೋ ದಿನ ಒಂದ್ಹೊತ್ತಿನ ಊಟಕ್ಕೆ ಕಷ್ಟಪಟ್ಟಿದ್ದುಂಟು. ತುಮಕೂರಿನ ಜೂನಿಯರ್ ಕಾಲೇಜು ಆವರಣದಲ್ಲಿ ಕಟ್ಟಿಗೆ ಹೊಡೆದಾಗ ಬಿದ್ದ ಚೂರುಗಳನ್ನು ಸಂಜೆ ಕತ್ತಲಾದ ಮೇಲೆ ಕೈಚೀಲದಲ್ಲಿ ತುಂಬಿಕೊಂಡು ಹೋಗಿ ಅನ್ನ ಬೇಯಿಸಿಕೊಂಡು ಉಂಡ ದಿನಗಳೂ ಇವೆ. ಅನ್ನದೊಳಗೆ ಮೆಣಸಿನ ಕಾಯಿ ಬೇಯಿಸಿ ಅದನ್ನೇ ಕಿವುಚಿ ಊಟ ಮಾಡಿದ ದಿನಗಳ ನೆನಪುಗಳನ್ನು ಅವರು ಹೇಳುತ್ತಿದ್ದರೆ ಕೇಳುತ್ತಿದ್ದವರ ಕಣ್ಣುಗಳು ಒಸರುತ್ತವೆ. ಕಷ್ಟದಲ್ಲಿಯೇ ತಮ್ಮ ಅಧ್ಯಯನವನ್ನು ಮುಂದುವರಿಸಿದ ಬರಗೂರರು ಪಿ.ಯು.ಸಿ. ನಂತರ ವೈದ್ಯರಾಗುವ ಆಸೆ ಹೊಂದಿದ್ದರು. ಆದರೆ ಆ ಆಸೆ ಈಡೇರಲಿಲ್ಲ. ಮುಂದೆ ತುಮಕೂರಿನ ಸರ್ಕಾರಿ ಪದವಿ ಕಾಲೇಜಿನಲ್ಲಿ ತಮ್ಮ ಬಿ.ಎ. ಪದವಿಯನ್ನು ಮುಗಿಸಿ ಕೊಂಡೆತಿಮ್ಮನಹಳ್ಳಿಯಲ್ಲಿ ಪ್ರೌಢಶಾಲಾ ಶಿಕ್ಷಕರಾಗಿ ತಮ್ಮ ವೃತ್ತಿ ಬದುಕನ್ನು ಆರಂಭಿಸಿದರು. ಅಲ್ಲಿ ತಾವೇ ರಚಿಸಿದ ನಾಟಕವನ್ನು ವಿದ್ಯಾರ್ಥಿಗಳಿಗೆ ಕಲಿಸಿ, ಅವರೊಂದಿಗೆ ತಾವೂ ಪಾತ್ರ ವಹಿಸಿ ವಿದ್ಯಾರ್ಥಿಗಳಲ್ಲಿ ಸ್ಫೂರ್ತಿ ಉಂಟಾಗುವಂತೆ ಮಾಡುತ್ತಿದ್ದರು. ಅಲ್ಲಿಂದಲೇ ಬರಗೂರರಿಗೆ ನಟನೆಯ ನಂಟು ಅಂಟಿದೆ. ಮುಂದೆ ನಟನಾಗಬೇಕೆಂದಿದ್ದ ಅವರು ನಟನನ್ನು ನಿಯಂತ್ರಿಸುವ ನಿರ್ದೇಶಕನಾದರೆ ಹೇಗೆ? ಎಂದು ಯೋಚಿಸಿದ್ದರು"[3] ಎಂದು ಹೇಳುವ ರಾಜಪ್ಪ ದಳವಾಯಿಯವರ ಮಾತುಗಳಲ್ಲಿ ಬರಗೂರರ ದೂರದೃಷ್ಟಿಯನ್ನು ಗಮನಿಸಬಹುದು.

ಪ್ರತಿಕ್ಷಣ ಹೊಸದರ ಅನ್ವೇಷಣೆಯಲ್ಲಿದ್ದ ಬರಗೂರರ ಚೇತನ ಅವರನ್ನು ಕೊಂಡೆತಿಮ್ಮನಹಳ್ಳಿಯಲ್ಲೇ ಇರಲು ಬಿಡಲಿಲ್ಲ. ಕನ್ನಡ ಎಂ.ಎ.ಗೆ ಸೇರಲು ಅವರು ಆ ಹಳ್ಳಿ ಬಿಟ್ಟು ಬೆಂಗಳೂರಿಗೆ ಬಂದರು. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಎಂ.ಎ. ಪದವಿಯನ್ನು ಪಡೆದು ತುಮಕೂರಿನ ಸರ್ಕಾರಿ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ವೃತ್ತಿ ಜೀವನವನ್ನೂ ಆರಂಭಿಸಿದರು. ನಂತರ 1975ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಕನ್ನಡ ಅಧ್ಯಾಪಕರಾಗಿ ಸೇರಿಕೊಂಡು ತಮ್ಮ

ಬಂಡಾಯ ಮನೋಭಾವಕ್ಕೆ ಸಾಹಿತ್ಯವನ್ನು ವೇದಿಕೆಯನ್ನಾಗಿ ಆರಿಸಿಕೊಂಡರು. 'ಮರಕುಟಿಗ' ಕವನ ಸಂಕಲನದೊಂದಿಗೆ ಸಾಹಿತ್ಯಕ ಕ್ಷೇತ್ರವನ್ನು ಪ್ರವೇಶಿಸಿದರು. ಗೋಕಾಕ್ ಚಳುವಳಿಗೆ ತೆರೆಯ ಹಿಂದೆ ನಿಂತೇ ಸಾಕಷ್ಟು ಕೆಲಸ ಮಾಡಿದರು. ಜೊತೆಗೆ ಬಂಡಾಯ ಸಾಹಿತ್ಯ ಸಂಘಟನೆಯನ್ನು ಕಟ್ಟಿ ಬೆಳೆಸುವ ಜವಾಬ್ದಾರಿ ಹೊತ್ತಿದ್ದರು. ಅಷ್ಟು ಹೊತ್ತಿಗೆ ಇಂದೂಧರ ಹೊನ್ನಾಪುರ, ಚನ್ನಣ್ಣ ವಾಲೀಕಾರ ಮುಂತಾದವರು ಮುಂಚೂಣಿಯಲ್ಲಿದ್ದರೂ ಬಂಡಾಯ ಸಾಹಿತ್ಯ ಸಂಘಟನೆಯ ಪ್ರಣಾಳಿಕೆಯನ್ನು ಸಿದ್ಧಪಡಿಸಿ ಬಂಡಾಯ ಸಾಹಿತ್ಯಕ್ಕೆ ಸ್ಪಷ್ಟ, ಸ್ವತಂತ್ರ ನಿಲುವು ನೀಡಿ ನಡೆಯಬೇಕಾದ ಮಾರ್ಗದ ಸ್ಪಷ್ಟ ದಿಕ್ಕು ತೋರಿಸಿದ್ದು ಬರಗೂರರು.

ಅಪಾರವಾದ ವೈಚಾರಿಕತೆಯ ಹಿನ್ನೆಲೆಯಲ್ಲಿ ತಮ್ಮ ಆಲೋಚನೆಗಳನ್ನು ಅಭಿವ್ಯಕ್ತಿಸಿರುವ ಬರಗೂರರ ಸಾಹಿತ್ಯ ವೈವಿಧ್ಯಮಯವಾದುದು. ಕಾವ್ಯ, ಸಣ್ಣಕತೆ, ಕಾದಂಬರಿ, ವಿಚಾರ, ವಿಮರ್ಶೆ, ಸಂಸ್ಕೃತಿ ಚಿಂತನೆ ಮತ್ತು ಸಂಪಾದನೆಯ ಕ್ಷೇತ್ರದಲ್ಲಿ ಗಣನೀಯ ಕೃಷಿ ಮಾಡಿದ್ದಾರೆ. 'ಕನಸಿನ ಕನ್ನಿಕೆ', 'ಮರಕುಟಿಗ', 'ನೆತ್ತರಲ್ಲಿ ನೆಂದ ಹೂವು', 'ಗುಲಾಮ ಗೀತೆ', 'ಮಗುವಿನ ಹಾಡು' ಮುಂತಾದ ಕವನ ಸಂಕಲನಗಳನ್ನು 'ಸುಂಟರಗಾಳಿ', 'ಬಯಲಾಟದ ಭೀಮಣ್ಣ', 'ಕಪ್ಪು ನೆಲದ ಕೆಂಪು ಕಾಲು' ಎಂಬ ಕಥಾ ಸಂಕಲನಗಳನ್ನು 'ಒಂದು ಊರಿನ ಕಥೆ', 'ಸಂಗಪ್ಪನ ಸಾಹಸಗಳು', 'ಸೂತ್ರ', 'ಉಕ್ಕಿನ ಕೋಟೆ', 'ಬೆಂಕಿ', 'ಗಾಜಿನ ಮನೆ', 'ಸ್ವಪ್ನಮಂಟಪ', 'ಶಬರಿ' ಮುಂತಾದ ಕಾದಂಬರಿಗಳನ್ನು ಬರೆದಿದ್ದಾರೆ. ಬರಗೂರರಿಗೆ ಸೃಜನಶೀಲ ಸಾಹಿತ್ಯದಷ್ಟೇ ಚಿಂತನಶೀಲ ಸಾಹಿತ್ಯವೂ ಮುಖ್ಯವಾಗಿ ಕಾಣಿಸಿದೆ. ಹಾಗಾಗಿ 'ಸಾಹಿತ್ಯ ಮತ್ತು ರಾಜಕಾರಣ', 'ಸಂಸ್ಕೃತಿ ಮತ್ತು ಸೃಜನಶೀಲತೆ', 'ರಾಜಕೀಯ ಚಿಂತನೆ', 'ಇಣುಕು ನೋಟ', 'ಬಂಡಾಯ ಸಾಹಿತ್ಯ ಮೀಮಾಂಸೆ', 'ಸಂಸ್ಕೃತಿ – ಉಪಸಂಸ್ಕೃತಿ', 'ವರ್ತಮಾನ', 'ಕನ್ನಡ ಸಾಹಿತ್ಯ ಮತ್ತು ಸಿನಿಮಾ' ಮುಂತಾದ ಕೃತಿಗಳಲ್ಲಿ ತಮ್ಮ ಅಪಾರವಾದ ಜ್ಞಾನದ ಸಂಪತ್ತು ಅಡಗಿರುವುದನ್ನು ಕಾಣಬಹುದಾಗಿದೆ. ಹೀಗೆ ಬರಗೂರರು ಅವರ ಬಹುಮುಖ ಪ್ರತಿಭೆಯ ಶಕ್ತಿಯಿಂದ ಅಪಾರವಾದ ಸಾಹಿತ್ಯ ಸೃಷ್ಟಿ ಮಾಡಿದ್ದಾರೆ. ಇದರ ಜೊತೆಗೆ ಮತ್ತೊಂದು ಮಾಧ್ಯಮವಾದ ಸಿನಿಮಾದಲ್ಲಿ ತಮ್ಮನ್ನು ತೊಡಗಿಸಿಕೊಂಡು 'ಒಂದು ಊರಿನ ಕಥೆ', 'ಬೆಂಕಿ', 'ಸೂರ್ಯ', 'ಏಕಲವ್ಯ', 'ಉಗ್ರಗಾಮಿ' ಮತ್ತು 'ಶಬರಿ' ಹೀಗೆ ಒಟ್ಟು 25 ಚಲನಚಿತ್ರಗಳನ್ನು ನೀಡಿದ್ದಾರೆ. ಬರಗೂರರು ಕನ್ನಡದ ಪ್ರಮುಖ ಸಾಹಿತಿಗಳು. ಕನ್ನಡ ಸಾಹಿತ್ಯ ಲೋಕದಲ್ಲಿ ಉಳಿದವರಿಗಿಂತ ಬದುಕನ್ನು ಬೇರೆಯದೇ ರೀತಿಯಲ್ಲಿ ಗ್ರಹಿಸಿದವರು. ಕಂಡದ್ದನ್ನು ನೇರವಾಗಿ ಹೇಳುವ, ಅನ್ಯಾಯವನ್ನು ಪ್ರತಿಭಟಿಸುವ ಗುಣವನ್ನು ಮೈಗೂಡಿಸಿಕೊಂಡವರು. ಇವರು ನಿರ್ದೇಶನ ಮಾಡಿದ ಮೊದಲ ಸಿನಿಮಾ 'ಒಂದು ಊರಿನ ಕಥೆ'. ಇದಕ್ಕೆ ಅವರು ಅದೇ ಹೆಸರಿನ ಕಾದಂಬರಿಯನ್ನು ಆಯ್ದುಕೊಂಡಿದ್ದಾರೆ. 'ಒಂದು ಊರಿನ ಕಥೆ'ಯಲ್ಲಿ ಬರುವ ಪಾತ್ರ ಬಂಡಾಯದ್ದು ಎಂಬ ರಾಜಪ್ಪ ದಳವಾಯಿಯವರ ಅಭಿಪ್ರಾಯವನ್ನು ಆ ಪಾತ್ರ ಸಮರ್ಥಿಸುತ್ತದೆ. ಹಾಗೆಯೇ ಪ್ರಥಮ ನಿರ್ದೇಶನಕ್ಕೆ ಉತ್ತಮ ಕಥಾಲೇಖಕ ಪ್ರಶಸ್ತಿಯ ಗರಿ. ಇದು ಅವರ ಮುಂದಿನ ಸಿನಿಮಾಗಳಿಗೆ ಸ್ಫೂರ್ತಿಯಾಯಿತು. ಮುಂದೆ ಅವರ ಮತ್ತೊಂದು ಶ್ರೇಷ್ಠ ಕಾದಂಬರಿ 'ಬೆಂಕಿ' ಯನ್ನು ಚಿತ್ರವಾಗಿಸಿದರು. ನಪುಂಸಕನಾದ ಗಂಡನ ಜೊತೆಯಲ್ಲಿ ಹೆಣ್ಣು ಅನುಭವಿಸುವ ಯಾತನೆಯನ್ನು ಇಲ್ಲಿ ಚಿತ್ರಿಸಿದ್ದಾರೆ. ಈ ಸಿನಿಮಾ ಸಹ ಹಲವು ರಾಜ್ಯ ಪ್ರಶಸ್ತಿಗಳನ್ನು ಬಾಚಿಕೊಂಡಿತು. ಜೊತೆಗೆ ಅತ್ಯುತ್ತಮ ಕಥಾಲೇಖಕ ಹಾಗೂ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿಗಳನ್ನು ತಂದುಕೊಟ್ಟಿತು. ಬರಗೂರರು ತಮ್ಮ ಮೂರನೆಯ ಸಿನಿಮಾಕ್ಕೆ ಮತ್ತೆ ತಮ್ಮದೇ ಆದ 'ಸೂರ್ಯ' ಕಾದಂಬರಿಯನ್ನು

ತೆಗೆದುಕೊಂಡು, ಕಥಾ ಸಾಹಿತ್ಯವನ್ನು ರಚಿಸಿ 'ಸೂರ್ಯ' ಹೆಸರಿನಲ್ಲೇ ಸಿನಿಮಾ ಮಾಡಿದರು. ಈ ಸಿನಿಮಾವು ಬರಗೂರರಿಗೆ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಶಸ್ತಿಗಳನ್ನು ತಂದುಕೊಟ್ಟಿತು.

ಬರಗೂರರ ನಾಲ್ಕನೆ ಸಿನಿಮಾ 'ಕೋಟೆ'. ಇದು ಮೊದಲ ಮೂರು ಚಿತ್ರಗಳಿಗಿಂತ ವಿಭಿನ್ನವಾದ ಸಿನಿಮಾ. ಒಂದೂ ಸಂಭಾಷಣೆ ಇಲ್ಲದೆ, ಹಾಡಿನ ವಿವಿಧ ಲಯ ಹಾಗೂ ವಿನ್ಯಾಸಗಳ ಮೂಲಕ ಇಡೀ ಚಿತ್ರವನ್ನು ನಿರ್ಮಿಸಿದರು. ಸನ್ನಿವೇಶದ ಸಂಭಾಷಣೆಗೆ ಅನುಗುಣವಾದ ಹಾಡುಗಳನ್ನು ರಚಿಸಿ ವಿವಿಧ ಮಟ್ಟುಗಳಲ್ಲಿ ಅವುಗಳಿಗೆ ರಾಗ ಸಂಯೋಜಿಸಿದರು. ಹೀಗಾಗಿ ಸಂಭಾಷಣೆಯೇ ಇಲ್ಲದಿರುವ ಅಪರೂಪದ ಹೊಸ ಪ್ರಯತ್ನ ಇದಾಗಿದೆ. ನಂತರ ಬುಡಕಟ್ಟು ಜನಾಂಗ ಮತ್ತು ಊರಿನ ಸಂಘರ್ಷ ಕುರಿತಾದ 'ಕರಡೀಪುರ' ಚಲನಚಿತ್ರವನ್ನು ತಯಾರಿಸಿದರು. 'ಕರಡೀಪುರ' ಬರಗೂರರ ಸಿದ್ಧ ಸಾಹಿತ್ಯದಿಂದ ನಿರ್ಮಾಣವಾದದ್ದಲ್ಲ. ಸಿನಿಮಾಕ್ಕಾಗಿಯೇ ಸಾಹಿತ್ಯ-ಕಥೆ ರಚಿಸಿಕೊಂಡರು. ಈ ಸಿನಿಮಾ ಕೂಡ ಇಂಗ್ಲೆಂಡ್ ನ 'ಲೀಡ್ಸ್ ಚಲನ ಚಿತ್ರೋತ್ಸವ'ಕ್ಕೆ ಆಯ್ಕೆಯಾಗಿ ಅಪಾರವಾದ ಯಶಸ್ಸನ್ನು ತಂದುಕೊಟ್ಟಿತು. ಹಾಗೆಯೇ ತಮ್ಮ ಸಣ್ಣಕತೆ 'ಕ್ಷಾಮ' ಆಧರಿಸಿ ಅದೇ ಹೆಸರಿನ ಸಿನಿಮಾ ಮಾಡಿದರು. ಈ ಸಿನಿಮಾ ಸಹ ಅವರಿಗೆ ಶ್ರೇಷ್ಠ ನಿರ್ದೇಶಕ ಪ್ರಶಸ್ತಿಯ ಜೊತೆಗೆ 2ನೇ ಅತ್ಯುತ್ತಮ ರಾಜ್ಯಪ್ರಶಸ್ತಿ ತಂದುಕೊಟ್ಟಿದೆ.

ಕಲಾತ್ಮಕ ಚಿತ್ರ ನಿರ್ದೇಶಕರೆಂದೇ ಹೆಸರು ಮಾಡಿದ್ದ ಬರಗೂರರು ಕಮರ್ಷಿಯಲ್ ಚಿತ್ರ ಮಾಡುವ ಮನಸ್ಸು ಮಾಡಿ ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿನ ಕರನಿರಾಕರಣೆಯ ವಸ್ತುವಿನ ಮೇಲೆ ಶಿವರಾಜ್‌ಕುಮಾರ್ ಮುಖ್ಯ ಭೂಮಿಕೆಯಲ್ಲಿರುವ 'ಹಗಲುವೇಷ' ಎಂಬ ಸಿನಿಮಾ ತೆಗೆದರು. ಇದಕ್ಕೂ ಕೂಡ ಸಿನಿಮಾಗಾಗಿಯೇ ಕಥೆ ರಚಿಸಿಕೊಂಡರು. ಹಾಗೆಯೇ ಮುಂದೆ ಏಕವ್ಯಕ್ತಿ ನಟನೆಯ 'ಶಾಂತಿ' ಚಿತ್ರ ತೆಗೆದರು. ಇದು ಹಲವು ದಾಖಲೆಗಳನ್ನು ಮಾಡಿತು. 'ಭಾವನಾ' ಒಬ್ಬರೇ ನಟಿಸಿದ ಈ ಚಿತ್ರ ಉಗ್ರಗಾಮಿಗಳನ್ನು ವಿರೋಧಿಸುವ ಮನಸ್ಸು ಮತ್ತು ವಿಶ್ವಶಾಂತಿಯ ಆಶಯ ಹೊಂದಿತ್ತು. ಜೊತೆಗೆ ಪ್ರಪಂಚದಲ್ಲಿಯೇ ಒಬ್ಬರೇ ನಟಿಸಿದ ಮೂರನೇ ಚಿತ್ರವಾಗಿ ಗಿನ್ನಿಸ್ ದಾಖಲೆ ಪುಸ್ತಕದಲ್ಲಿ ಸೇರ್ಪಡೆಯಾಯಿತು.

ಆನಂತರ ಮ್ಯಾಕ್ಸಿಂಗಾರ್ಕಿಯವರ 'ಮದರ್' ಕಾದಂಬರಿಯಾಧಾರಿತ 'ತಾಯಿ' ಎಂಬ ಚಿತ್ರವನ್ನು ನಿರ್ದೇಶನ ಮಾಡಿದರು. ಈ ಚಿತ್ರವು ರಾಷ್ಟ್ರೀಯ ಪುರಸ್ಕಾರ ಪಡೆಯುವ ಜೊತೆಗೆ ಕನ್ನಡ ಚಿತ್ರ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಬರಗೂರರಿಗೆ 'ಗೀತ ರಚನೆ'ಗಾಗಿ ಮತ್ತೊಂದು ಪ್ರಶಸ್ತಿಯನ್ನು ತಂದುಕೊಟ್ಟಿತು. ನಂತರ ಮಕ್ಕಳ ಚಿತ್ರವಾದ 'ಏಕಲವ್ಯ' ಚಿತ್ರ ನಿರ್ದೇಶನ ಮಾಡಿದರು. ಈ ಚಿತ್ರವೂ ಸಹ ಶ್ರೇಷ್ಠ 'ಮಕ್ಕಳ ಚಿತ್ರ' ವಾಗಿ ರಾಜ್ಯ ಪ್ರಶಸ್ತಿಯನ್ನು ಪಡೆಯಿತು. ನಂತರದಲ್ಲಿ 'ಉಗ್ರಗಾಮಿ' ಎಂಬ ಸಿನಿಮಾ ನಿರ್ದೇಶನ ಮಾಡಿದರು. ಇದು ಕೂಡ ಶ್ರೇಷ್ಠ ಸಿನಿಮಾಗಳ ಸಾಲಿನಲ್ಲಿ ನಿಲ್ಲುವಂತಹದು. ಆದಿವಾಸಿಗಳ ಬದುಕನ್ನು ಕುರಿತಾದ 'ಶಬರಿ' ಎಂಬ ಅವರದೇ ಕಾದಂಬರಿ ಆಧರಿಸಿ 'ಶಬರಿ' ಚಿತ್ರ ನಿರ್ದೇಶಿಸಿದ್ದಾರೆ. ಹೀಗೆ ಬರಗೂರರು ಕನ್ನಡ ಸಾಹಿತ್ಯ ಮತ್ತು ಸಿನಿಮಾ – ಈ ಎರಡೂ ಮಾಧ್ಯಮಗಳಲ್ಲಿ ತಮ್ಮ ಸೃಜನಶೀಲತೆಯಿಂದ ಉತ್ತಮ ಕೃತಿಗಳನ್ನು ನಮ್ಮ ಸಮಾಜಕ್ಕೆ ಕೊಟ್ಟಿದ್ದಾರೆ.

**ಅಡಿ ಟಿಪ್ಪಣಿಗಳು**

1 ಸಿ.ಎನ್. ರಾಮಚಂದ್ರನ್, ಸಾಹಿತ್ಯ ವಿಮರ್ಶೆ, ಪುಟ: 112

2 ಸಣ್ಣರಾಮ – ಸಂವಾದ ಮಾಸಪತ್ರಿಕೆ ಫೆಬ್ರವರಿ 2008

3 ರಂಗರಾಜ ವನದುರ್ಗ, ದೇವನಾಗೇಶ್ (ಸ್ವ) ಬರಗೂರರ ಶಾಂತಿ ಚಿತ್ರ, ಪುಟ: 46, 2005